ಈ) ಶಿವಮೊಗ್ಗ ನಗರದ ವಾಂಬೆ ಯೋಜನೆಯಡಿ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಒಟ್ಟು 222 ಮನೆಗಳನ್ನು ನಿರ್ಮಾಣ ಮಾಡಲು ಫಲಾನುಭವಿಗಳ ಆಯ್ಕೆ ಮಾಡಲಾಗಿದೆ.

ಆನ್‌ಲೈನ್ ಲಾಟರಿ ಯೋಜನೆ

1012 (456) - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ (ಶಿವಮೊಗ್ಗ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ಯೋಜನೆಗೆ ಸರ್ಕಾರದ ವತಿಯಿಂದ ಅನುಮತಿ ನೀಡಲಾಗಿದೆಯೇ, ಈ ಯೋಜನೆಯಡಿಯಲ್ಲಿ ಹೊರ ರಾಜ್ಯಗಳ ಆನ್‌ಲೈನ್ ಲಾಟರಿ ಮಾರಾಟ ಮಾಡಲು ಸರ್ಕಾರದ ಪ್ರತ್ಯೇಕ ಪರವಾನಗಿ ಅವಶ್ಯಕತೆ ಇದೆಯೇ?

ಶ್ರೀ ಬಾಬುರಾವ್ ಚಿಂಚಸನೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ವತಿಯಿಂದ ಗಣಕೀಕೃತ ಆನ್‌ಲೈನ್ ಲಾಟರಿ ಯೋಜನೆಯನ್ನು ನಡೆಸಲು ನಿರ್ಧರಿಸಿ ಒಬ್ಬ ಮಾರುಕಟ್ಟೆ ಏಜೆಂಟರನ್ನು ನೇಮಕಾತಿ ಮಾಡಲಾಗಿದೆ.

ಈ ಯೋಜನೆಯಡಿಯಲ್ಲಿ ಹೊರ ರಾಜ್ಯಗಳ ಆನ್‌ಲೈನ್ ಲಾಟರಿ ಮಾರಾಟ ಮಾಡಲು ಪ್ರತ್ಯೇಕ ಅನುಮತಿ ಅವಶ್ಯವಿರುವುದಿಲ್ಲ ಆದರೂ ಸಹ ಈ ರಾಜ್ಯದಲ್ಲಿ ಹೊರ ರಾಜ್ಯದ ಲಾಟರಿ ಟಿಕೇಟ್ ಮಾರಾಟವನ್ನು ಕ್ರಮಬದ್ಧಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಲಾಟರಿ ನಿಯಮ 1999ರಲ್ಲಿ ನಿಗದಿಪಡಿಸಿರುವ ನಮೂನೆ - II ರಲ್ಲಿ ಮಾಹಿತಿಯನ್ನು ಆಯಾ ರಾಜ್ಯಗಳು ನೀಡುವ ಅವಶ್ಯಕತೆ ಇದೆ.

ಶಿವಮೊಗ್ಗ ನಗರದಲ್ಲಿನ ವರ್ತುಲ ರಸ್ತೆ ನಿರ್ಮಾಣ

1013 (459) - ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣ ಮಾಡಲಾಗುತ್ತಿರುವ 100 ಅಡಿ ವರ್ತುಲ ರಸ್ತೆಯ ಕಾಮಗಾರಿಯು ಯಾವ ಹಂತದಲ್ಲಿದೆ? ಇದುವರೆಗೆ ಈ ಯೋಜನೆಗೆ ವಿನಿಯೋಗಿಸಿರುವ ಹಣ ಎಷ್ಟು ? ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಆ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿವೇಶನ ರಹಿತರಿಗೆ ಅನುಕೂಲಕ್ಕಾಗಿ ಹೊಸ ಬಡಾವಣೆಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಬಡಾವಣೆಗಳಲ್ಲಿ ಎಷ್ಟು ನಿವೇಶನಗಳನ್ನು ಹಂಚುವ ಯೋಜನೆ ಸರ್ಕಾರದ ಮುಂದಿದೆ. ನಿವೇಶನಗಳನ್ನು ಯಾವಾಗ ವಿತರಿಸಲಾಗುವುದು:

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 16 ಕಿ.ಮಿ. ಉದ್ದದ 100 ಅಡಿ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡಿದ್ದು, ಅದರಲ್ಲಿ 10.85 ಕಿ.ಮಿ. ನಷ್ಟು ಉದ್ದದ ರಸ್ತೆಗೆ ಡಾಂಬರೀಕರಣ ಮಾಡಲಾಗಿದೆ. ಇನ್ನು ಉಳಿದ 5.51 ಕಿ.ಮೀ ಉದ್ದದ ರಸ್ತೆಯಲ್ಲಿ